**<u>ದಿನಾಂಕಃ 09–03–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

12. ಈಗ ನೋಡುತ್ತಿರುವ ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುತ್ತಿದೆ. ಸಾಕ್ಷಿದಾರರು ಗುರುತಿಸಿದ ಫೋಟೋಗಳನ್ನು ಕ್ರಮವಾಗಿ ನಿಪಿ–57 ಹಾಗೂ 58 ಎಂದು ಗುರುತಿಸಲಾಯಿತು. ನಿಪಿ–57 ಹಾಗೂ 58 ಫೋಟೋಗಳನ್ನು ಪೊಲೀಸರು ಯಾವ ಸ್ಥಳದಲ್ಲಿ ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಗೆದಿರುತ್ತಾರೆಂದು ನನಗೆ ತಿಳಿದಿಲ್ಲ. ನಿಪಿ–57 ಹಾಗೂ 58 ರಲ್ಲಿ ಕಂಡು ಬರುವ ವಾಹನಗಳು ಒಂದು ಗೂಡ್ಸ್ ವಾಹನ ಹಾಗೂ ಮೋಟಾರು ಬೈಕ್ ಆಗಿರುತ್ತದೆ. ಸದರಿ ಗೂಡ್ಸ್ ವಾಹನ ಹಾಗೂ ಮೋಟಾರು ಬೈಕ್ ಯಾರಿಗೆ ಸೇರಿದ ವಾಹನಗಳು ಹಾಗೂ ಈ ಪ್ರಕರಣಕ್ಕೆ ಅವುಗಳು ಹೇಗೆ ಸಂಬಂಧಪಟ್ಟಿದ್ದವು ಎಂಬುದು ನನಗೆ ತಿಳಿದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ನನ್ನ ಹೇಳಿಕೆ ಪಡೆದಿಲ್ಲ. ಈಗ ನೋಡುತ್ತಿರುವ ನಿಪಿ–29 ಮಹಜರಿನಲ್ಲಿರುವ ಸಹಿ ನನ್ನದು. ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–29(ಸಿ) ಎಂದು ಗುರುತಿಸಲಾಯಿತು. ನಿಪಿ–29 ಮಹಜರಿಗೆ ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನಾನು ಹಿಂದೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

13. ದಿಃ19.06.2022 ರಂದು ಅರೇಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ

ರವರು ನನ್ನನ್ನು ಹಾಗೂ ಚಾಸಾ-9 ಹನೀಫ್ ರವರನ್ನು ಪೊಲೀಸ್ ಠಾಣೆಗೆ ಕರೆಸಿ ಠಾಣಾ ಮೊಃನಂ.50/2022 ಪ್ರಕರಣದಲ್ಲಿನ ವಿದ್ಯಮಾನಗಳನ್ನು ತಿಳಿಸಿ ಅವರು ದಸ್ತಗಿರಿ ಮಾಡಿದ್ದ 1ನೇ ಆರೋಪಿ ಶಂಕರ್ ಮಂಜುಗೌಡ ಹಾಗೂ 2ನೇ ಆರೋಪಿ ವಿಜಯಕುಮಾರ್ ರವರನ್ನು ತೋರಿಸಿ ಈ ಆರೋಪಿಗಳು ನೀಡಿರುವ ಸ್ವಇಚ್ಛಾ ಹೇಳಿಕೆಗಳ ಬಗ್ಗೆ ಮಾಹಿತಿ ನೀಡಿ ಈ ಆರೋಪಿಗಳು ಪ್ರಕರಣದ ಉಳಿದ ಆರೋಪಿಗಳೊಂದಿಗೆ ಸೇರಿ ಹಲವಾರು ಕಡೆ ವಾಹನ ಕಳ್ಳತನ ಮಾಡಿದ್ದು ಈ ಸಂಬಂಧ ಆರೋಪಿ-1 ಹಾಗೂ 2 ರವರು ನೀಡಿರುವ ಮಾಹಿತಿ ಮೇರೆಗೆ ಮಹಜರ್ ತಯಾರಿಸಬೇಕಾಗಿದ್ದು ಸದರಿ ಮಹಜರ್ ಕಾಲದಲ್ಲಿ ಹಾಜರಿದ್ದು ಸಹಕಾರ ನೀಡುವಂತೆ ಕೋರಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪಿಎಸ್ಐ ರವರು ಆರೋಪಿ-1ಹಾಗೂ 2 ಮತ್ತು ಠಾಣಾ ಸಿಬ್ಬಂದಿಗಳೊಂದಿಗೆ ಠಾಣೆಯಿಂದ ಬೆಳಿಗ್ಗೆ 11.30 ಗಂಟೆ ಸಮಯಕ್ಕೆ ಹೊರಟು ಬಿಕ್ಕೋಡು ಬೇಲೂರು ಮುಖ್ಯ ರಸ್ತೆಯ ತಗರೆ ಗ್ರಾಮದ ರಾಜೇಗೌಡರ ಅಂಗಡಿಯ ಬಳಿ ಹೋಗಿದ್ದು ಅಲ್ಲಿ ಆರೋಪಿ-1 ಹಾಗೂ 2 ರವರು ರಾಜೇಗೌಡರಿಗೆ ಸೇರಿದ ಖಾಲಿ ಗೋಡಾನ್ ನ ಮುಂದಿನ ಜಾಗವನ್ನು ಗುರುತಿಸಿ ಸದರಿ ಜಾಗದಲ್ಲಿ ಹಿಂದಿನ ವರ್ಷ ಮೇ-1ನೇ ತಾರೀಖಿನ ರಾತ್ರಿ ಕೆಎ.18.ಬಿ.6707 ನೊಂದಾವಣಿ ಸಂಖ್ಯೆಯ ಬೊಲೆರೋ ಪಿಕ್ ಅಪ್ ವಾಹನವನ್ನು ಕಳವು ಮಾಡಿ ಆ ವಾಹನವನ್ನು ತಮಿಳುನಾಡಿನ ಹೊಸೂರಿಗೆ ತೆಗೆದುಕೊಂಡು ಹೋಗಿ ಅಲ್ಲಿ 6ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ ಮೇರೆಗೆ ಸದರಿ ತಗರೆ ಗ್ರಾಮದ ರಾಜೇಗೌಡರ ಗೋಡಾನ್ ಮುಂದೆ ಪೊಲೀಸರು ನಿಪಿ-2 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಇತರೆ ಪಂಚ ಸಾಕ್ಷಿಗಳು ನಮ್ಮ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿ-1 ಹಾಗೂ 2 ರವರು ಪೊಲೀಸರನ್ನು ಹಾಗೂ

ನಮ್ಮನ್ನು ಕರೆದುಕೊಂಡು ಬೇಲೂರು ಮೂಡಿಗೆರೆ ಮಾರ್ಗವಾಗಿ ನಿಡಗೋಡು ಗ್ರಾಮದ ಪುನೀತ್ ಚಿಕಿನ್ ಸೆಂಟರ್ ಮಳಿಗೆ ಬಳಿ ಮಧ್ಯಾಹ್ನ 1.15 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ಹಿಂದಿನ ವರ್ಷ ಫೆಬ್ರವರಿ ತಿಂಗಳ ಕೊನೆಯ ದಿನ ರಾತ್ರಿ 11.30 ಗಂಟೆ ಸಮಯದಲ್ಲಿ ಅವರು ಉಳಿದ ಆರೋಪಿಗಳೊಂದಿಗೆ ಸೇರಿ ಸದರಿ ಸ್ಥಳದಲ್ಲಿ ನಿಲ್ಲಿಸಿದ್ದ ಕೆಎ.46.6715 ನೊಂದಾವಣಿ ಸಂಖ್ಯೆಯ ಬೊಲೆರೋ ಪಿಕ್ ಅಪ್ ವಾಹನವನ್ನು ಕಳವು ಮಾಡಿಕೊಂಡು ತಮಿಳುನಾಡಿನ ಹೊಸೂರಿನ ಬಳಿ ತೆಗೆದುಕೊಂಡು ಹೋಗಿ ಅಲ್ಲಿ 6ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ ಸ್ಥಳ ಗುರುತಿಸಿದ ಮೇರೆಗೆ ನಿಡಗೋಡು ಗ್ರಾಮದ ದರ್ಶನ್ ರವರಿಗೆ ಸೇರಿದ ಪುನೀತ್ ಚಿಕನ್ ಸೆಂಟರ್ ಮುಂದೆ ಪೊಲೀಸರು ನಿಪಿ-4 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಇತರೆ ಪಂಚ ಸಾಕ್ಷಿಗಳು ನಮ್ಮ ಸಹಿಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-4 ಮಹಜರ್ ಕಾಲದಲ್ಲಿ ಪೊಲೀಸರು ನಿಪಿ-5 ಹಾಗೂ 6 ಫೋಟೋಗಳನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಗಳು ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ಬೇಲೂರು ಮಾರ್ಗವಾಗಿ ಬೇಲೂರು ಹಾಸನ ಮುಖ್ಯ ರಸ್ತೆಯ ಬೇಲೂರು ಟೌನ್ ನೆಹರೂ ನಗರದ ಅಪಲೋ ಟೈರ್ ಶೋ ರೂಂ ಅಂಗಡಿ ಬಳಿಗೆ ಮಧ್ಯಾಹ್ನ 3.40 ಗಂಟೆ ಸಮಯಕ್ಕೆ ಕರೆದುಕೂಂಡು ಹೋಗಿ ಆ ಸ್ಥಳದಲ್ಲಿ ಹಿಂದಿನ ವರ್ಷ ಮೇ ತಿಂಗಳ ಕೊನೆಯ ಶನಿವಾರದ ರಾತ್ರಿ ಅಲ್ಲಿ ನಿಲ್ಲಿಸಿದ್ದ ಕೆಎ.46.9007 ನಂಬರಿನ ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನವನ್ನು ಕಳವು ಮಾಡಿ ಆ ವಾಹನವನ್ನು 2ನೇ ಆರೋಪಿ ವಿಜಯಕುಮಾರ್ ರವರ ಸ್ವಂತ ಊರಿನಲ್ಲಿ ನಿಲ್ಲಿಸಿರುವುದಾಗಿ ಹೇಳಿ ವಾಹನ ಕಳವು ಮಾಡಿದ ಸ್ಥಳವನ್ನು ಗುರುತಿಸಿದ ಮೇರೆಗೆ ಪೊಲೀಸರು ಅಪೊಲೋ ಟೈರ್ ಶೋ ರೂಂ ಮುಂಭಾಗ ನಿಪಿ-7 ರಂತೆ ಸ್ಥಳ

ಮಹಜರ್ ತಯಾರಿಸಿದಾಗ ನಾನು ಹಾಗೂ ಮಹಜರಿನ ಇತರೆ ಪಂಚ ಸಾಕ್ಷಿಗಳು ಮಹಜರಿಗೆ ನಮ್ಮ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–7 ಮಹಜರ್ ಕಾಲದಲ್ಲಿ ಪೊಲೀಸರು ನಿಪಿ–8 ಹಾಗೂ 9 ಫೋಟೋಗಳನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

14. ನಂತರ ದಿ:20.06.2022 ರಂದು ಅರೇಹಳ್ಳಿ ಠಾಣೆಯ ಪಿಎಸ್‌ಐ ರವರು ನಮ್ಮನ್ನು ಪುನಃ ಠಾಣೆಗೆ ಕರೆಯಿಸಿ ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ ಮುಂದುವರಿದ ವಿಚಾರಣೆಗೆ ಸಹಕರಿಸಲು ಕೋರಿಕೊಂಡಿದ್ದು ನಾವು ಒಪ್ಪಿಕೊಂಡ ಮೇರೆಗೆ ಆರೋಪಿ–1 ಹಾಗೂ 2 ರವರು ಪಿಎಸ್‌ಐ ರವರನ್ನು, ನಮ್ಮನ್ನು ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಬೆಳಿಗ್ಗೆ 11 ಗಂಟೆ ಸಮಯಕ್ಕೆ ಸಕಲೇಶಪಪುರ ಮಾರ್ಗವಾಗಿ ಸಲೇಶಪುರ ಟೋಲ್ ಗೇಟ್ ಬಳಿ ಒಂದು ಕಬ್ಬಿಣದ ಅಂಗಡಿಯ ಹತ್ತಿರ ಬೆಳಿಗ್ಗೆ 11.45 ಗಂಟೆಗೆ ಕರೆದುಕೊಂಡು ಹೋಗಿ ಹಿಂದಿನ ವರ್ಷ ಫೆಬ್ರವರಿ ತಿಂಗಳ 2ನೇ ಗುರುವಾರದಂದು ರಾತ್ರಿ ಅವರು ನಿಲ್ಲಿಸಿದ್ದ ಕೆಎ.46.5255 ಬೊಲೆರೋ ವಾಹನವನ್ನು ಕಳವು ಮಾಡಿ ಆ ವಾಹನವನ್ನು ತಮಿಳುನಾಡಿನ ಹೊಸೂರು ಬಳಿ ತೆಗೆದುಕೊಂಡು ಹೋಗಿ ಅಲ್ಲಿ 6ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ ಅವರು ಕಳವು ಮಾಡಿದ ಸ್ಥಳವನ್ನು ಗುರುತಿಸಿದ್ದು ಸದರಿ ಸ್ಥಳವಾದ ಸಕಲೇಶಪುರ ಟೋಲ್ ಬಳಿ ಚಂದ್ರಶೇಖರ್ ರವರ ಎಸ್ ಎಸ್ ಸ್ಟೀಲ್ ಗೇಟ್ ಬಳಿ ಪೊಲೀಸರು ನಿಪಿ–10 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಮಹಜರಿನ ಇತರೆ ಪಂಚ ಸಾಕ್ಷಿಗಳು ಸಹಿ ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ–12 ಹಾಗೂ 13 ಫೋಟೋಗಳನ್ನು ಸಹ ತೆಗೆದಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಆರೋಪಿ–1 ಹಾಗೂ 2 ರವರು

ಪೊಲೀಸರನ್ನು ಪಂಚರಾದ ನಮ್ಮನ್ನು ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಬಾಳುಪೇಟೆ ಆಲೂರು ಮಾರ್ಗವಾಗಿ ಬೈರಾಪುರದ ಮಧುರವರ ಅಂಗಡಿ ಮಳಿಗೆ ಮುಂಭಾಗ ಮಧ್ಯಾಹ್ನ 3.15 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ಹಿಂದಿನ ವರ್ಷ ಮೇ ತಿಂಗಳ ರಾತ್ರಿ ಅವರು ಸದರಿ ಸ್ಥಳದಿಂದ ಕೆಎ.46.6245 ನಂಬರಿನ ಬುಲೆರೋ ವಾಹನವನ್ನು ಕಳವು ಮಾಡಿ ಆ ವಾಹನವನ್ನು ತಮಿಳುನಾಡಿನ ಹೊಸೂರು ಹತ್ತಿರ ಕರೆದುಕೂಂಡು ಹೋಗಿ 6ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ ವಾಹನ ಕಳವು ಮಾಡಿದ ಸ್ಥಳವನ್ನು ತೋರಿಸಲಾಗಿ ಪೊಲೀಸರು ಬೈರಾಪುರದ ಮಧುರವರ ಅಂಗಡಿ ಮಳಿಗೆಯ ಮುಂಭಾಗ ನಿಪಿ–14 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಮಹಜರಿನ ಪಂಚ ಸಾಕ್ಷಿಗಳು ಹಾಜರಿದ್ದು ಸಹಿ ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ–15 ಹಾಗೂ 16 ಫೋಟೊಗಳನ್ನು ಸಹ ತೆಗೆದಿರುತ್ತಾರೆಂದರೆ ಸರಿಯಲ್ಲ.

15. ದಿನಾಂಕಃ 21.06.2022 ರಂದು ಅರೇಹಳ್ಳಿ ಠಾಣಾ ಪಿಎಸ್ಐ ರವರು ನನ್ನನ್ನು ಹಾಗೂ ಚಾಸಾ–9 ಹನೀಫ್ ರವರನ್ನು ಮತ್ತೆ ಠಾಣೆಗೆ ಕರೆಯಿಸಿ ಪ್ರಕರಣದ ಮುಂದಿನ ತನಿಖೆಗೆ ಸಹಕರಿಸುವಂತೆ ಕೋರಿದ್ದು ನಾವು ಒಪ್ಪಿಕೊಂಡ ಮೇರೆಗೆ ಠಾಣೆಯಿಂದ ನಾವು ಹಾಗೂ ಆರೋಪಿ–1 ಹಾಗೂ 2 ರವರು ಮತ್ತು ಸಿಬ್ಬಂದಿಗಳು ವಾಹನದಲ್ಲಿ ಹೊರಟ್ಟಿದ್ದು ಆರೋಪಿ–1 ಹಾಗೂ 2 ರವರು ನಮ್ಮನ್ನು ಕರೆದುಕೂಂಡು ಹಾಸನ ಮಾರ್ಗವಾಗಿ ಹಾಸನ ಅರಕಲಗೂಡು ಮುಖ್ಯ ರಸ್ತೆಯ ಕಟ್ಟಾಯ ಫಾರೆಸ್ಟಿನ ಹತ್ತಿರ ಬೆಳಿಗ್ಗೆ 8.15 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ವಾಹನದಿಂದ ಇಳಿದು ಸ್ಥಳ ಗುರುತಿಸಿ ಹಿಂದಿನ ವರ್ಷ ಮೇ ತಿಂಗಳ 9ನೇ ತಾರೀಕಿನ ರಾತ್ರಿ ಅವರು ಸದರಿ ಸ್ಥಳದಲ್ಲಿ ವಡ್ಡರಹಳ್ಳಿ ಮನೆಯ ಮುಂದೆ ಕಳ್ಳತನ ಮಾಡಿದ್ದ ಕೆಎ.13.ಬಿ.7079 ನಂಬರಿನ ಬೊಲೆರೂ ಪಿಕ್

ಅಪ್ ವಾಹನವನ್ನು ಇದೇ ಸ್ಥಳದಲ್ಲಿ ನಿಲ್ಲಿಸಿ ಹೋಗಿದ್ದಾಗ ಸದರಿ ಸ್ಥಳವನ್ನು ಅವರು ಗುರುತಿಸಿದ ಮೇರೆಗೆ ಪೊಲೀಸರು ಹಾಸನ ಅರಕಲಗೂಡು ರಾಜ್ಯ ಹೆದ್ದಾರಿಯ ಕಟ್ಟಾಯ ಫಾರೆಸ್ಟ್ ನ ಕಾವಲು ದಾರಿಯ ಬಳಿ ನಿಪಿ-17 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಇತರೆ ಪಂಚ ಸಾಕ್ಷಿಗಳು ಸದರಿ ಮಹಜರಿಗೆ ನಮ್ಮ ಸಹಿಗಳನ್ನು ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ-18 ಹಾಗೂ 19 ಫೋಟೋಗಳನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ-1 ಹಾಗೂ 2 ರವರು ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ಕಟ್ಟಾಯ ಗೊರೂರು ಮಾರ್ಗವಾಗಿ ವಡ್ಡರಹಳ್ಳಿ ಗ್ರಾಮದ ಪ್ರದೀಪ್ ರವರ ಮನೆಯ ಹತ್ತಿರ ಬೆಳಿಗ್ಗೆ 9.30 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ಹಿಂದಿನ ವರ್ಷ ಮೇ ತಿಂಗಳ 9ನೇ ತಾರೀಖಿನ ರಾತ್ರಿ ಆರೋಪಿಗಳು ಸದರಿ ಸ್ಥಳದಿಂದ ಕೆಎ.13.ಬಿ.7079 ನಂಬರಿನ ಬುಲೆರೋ ಪಿಕ್ ಅಪ್ ವಾಹನವನ್ನು ಕಳವು ಮಾಡಿಕೊಂಡು ಹೋಗಿ ನಂಬರ್ ಬದಲಾಯಿಸಿ ಕಟ್ಟಾಯ ಹತ್ತಿರ ನಿಲ್ಲಿಸಿದ್ದಾಗಿ ತಿಳಿಸಿ ಸ್ಥಳ ಗುರುತಿಸಿದ ಮೆರೇಗೆ ಪೊಲೀಸರು ನಿಪಿ-20 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಮಹಜರಿನ ಪಂಚ ಸಾಕ್ಷಿಗಳು ಮಹಜರಿಗೆ ಸಹಿ ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ-21 ಹಾಗೂ 22 ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಗಳು 1 ಹಾಗೂ 2 ರವರು ಅರಕಲಗೂಡು ಮಾರ್ಗವಾಗಿ ಹೊಳೇನರಸೀಪುರ ತಾಲ್ಲೂಕಿನ ಕಡವಿನಕೋಟೆ ಗ್ರಾಮದ ಲೋಕೇಶ ರವರ ರಂಗನಾಥಸ್ವಾಮಿ ವೇ ಬ್ರಿಡ್ಜ್ ಬಳಿ ಬೆಳಿಗ್ಗ 11.45 ಗಂಟೆ ಸಮಯಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ವಾಹನದಿಂದ ಇಳಿದು ಹಿಂದಿನ ವರ್ಷ ಮೇ ತಿಂಗಳ 17ನೇ ತಾರೀಖಿನ ರಾತ್ರಿ ಆರೋಪಿಗಳು ಸೇರಿ ಸದರಿ ಎಪಿ-26-ವೈ-7484 ನಂಬರಿನ

ಬುಲೆರೋ ಕ್ಯಾಂಫರ್ ವಾಹನವನ್ನು ಕಳವು ಮಾಡಿಕೊಂಡು ಹೋಗುವಾಗ ಹಂಗರಹಳ್ಳಿ ಮುಂದೆ ವಾಹನ ಕೆಟ್ಟು ನಿಂತಿದ್ದು ಸ್ಟಾರ್ಟ್ ಆಗದೆ ಹೋದಾಗ ಅಲ್ಲೇ ಒಂದು ಜಲ್ಲಿ ಕ್ರಷರ್ ಹತ್ತಿರ ವಾಹನವನ್ನು ನಿಲ್ಲಿಸಿದ್ದಾಗಿ ತಿಳಿಸಿ ತಾವು ವಾಹನ ಕಳವು ಮಾಡಿದ ಸ್ಥಳವನ್ನು ಗುರುತಿಸಿದ ಮೆರೇಗೆ ಪೊಲೀಸರು ಕಡವಿನ ಕೋಟೆ ಲೋಕೇಶ ರವರ ರಂಗಾನಾಥಸ್ವಾಮಿ ವೇ ಬ್ರಿಡ್ಜ್ ಬಳಿ ನಿಪಿ–23 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಇತರೆ ಪಂಚ ಸಾಕ್ಷಿಗಳು ಸಹಿ ಮಾಡಿದ ಕಾಲದಲ್ಲಿ ಪೊಲೀಸರು ನಿಪಿ–24 ಹಾಗೂ 25 ಫೋಟೋಗಳನ್ನು ತೆಗೆಸಿರುತ್ತಾರೆಂದರೆ ಸರಿಯಲ್ಲ. ನಂತರ ಆರೋಪಿ–1 ಹಾಗೂ 2 ರವರು ನಮ್ಮನ್ನು ಪೊಲೀಸರನ್ನು ಕರೆದುಕೊಂಡು ಹರಗನಹಳ್ಳಿ ಮಾರ್ಗವಾಗಿ ಸಿಗರನಹಳ್ಳಿ ಗ್ರಾಮದ ಶಿವರಾಜುರವರ ಮನೆಯ ಹತ್ತಿರ ಮಧ್ಯಾಹ್ನ 12.30 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ಅವರು ಹಿಂದಿನ ವರ್ಷ ಮೇ 12ನೇ ತಾರೀಖಿನ ರಾತ್ರಿ ಆ ಸ್ಥಳದಲ್ಲಿ ನಿಲ್ಲಿಸಿದ್ದ ಕೆಎ.13.ಬಿ.2347 ನಂಬರಿನ ಅಶೋಕ ಲೈಲ್ಯಾಂಡ್ ದೋಸ್ತ್ ವಾಹನವನ್ನು ಕಳವು ಮಾಡಿ ಆ ವಾಹನವನ್ನು ತಮಿಳುನಾಡಿನ ಹೊಸೂರು ಹತ್ತಿರ ತೆಗೆದುಕೊಂಡು ಹೋಗಿ 6ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ ತಾವು ವಾಹನ ಕಳವು ಮಾಡಿದ ಸ್ಥಳವನ್ನು ತೋರಿಸಿದಾಗ ಸಿಗರನಹಳ್ಳಿ ಶಿವರಾಜುರವರ ಮನೆಯ ಮುಂದಿನ ಜಾಗದಲ್ಲಿ ಪೊಲೀಸರು ನಿಪಿ–26 ಮಹಜರನ್ನು ತಯಾರಿಸಿದ ಕಾಲದಲ್ಲಿ ನಾನು ಹಾಗೂ ಸದರಿ ಮಹಜರಿನ ಇತರೆ ಸಾಕ್ಷಿದಾರರುಗಳು ನಮ್ಮ ಸಹಿಗಳನ್ನು ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ–27 ಹಾಗೂ 28 ಫೋಟೋಗಳನ್ನು ಸಹ ತೆಗೆದಿರುತ್ತಾರೆಂದರೆ ಸರಿಯಲ್ಲ. ನಂತರ ಆರೋಪಿ–1 ಹಾಗೂ 2 ರವರು ನಮ್ಮನ್ನು ಪೊಲೀಸ್ ಸಿಬ್ಬಂದಿಗಳನ್ನು ಕರೆದುಕೊಂಡು ಸಿಗರನಹಳ್ಳಿ ಗ್ರಾಮದಿಂದ ಹೊರಟು

ಹರದನಹಳ್ಳಿ ಹಳೇಕೋಟೆ ಮಾರ್ಗವಾಗಿ ಹಂಗರಹಳ್ಳಿ ಗೊರೂರು ರಸ್ತೆಯ ಪೆಟ್ರೋಲ್ ಬಂಕ್ ಹತ್ತಿರ ಮಧ್ಯಾಹ್ನ 3.30 ಗಂಟೆಗೆ ಕರೆದುಕೊಂಡು ಹೋಗಿ ವಾಹನದಿಂದ ಇಳಿದು ಹಿಂದಿನ ವರ್ಷ ಫೆಬ್ರವರಿ ತಿಂಗಳ ಕೊನೆಯ ಸೋಮವಾರ ಅವರು ಸ್ಥಳದಿಂದ ಕೆಎ.32.ಎಂ.6688 ನಂಬರಿನ ಸ್ಕಾರ್ಪಿಯೋ ವಾಹನವನ್ನು ಕಳವು ಮಾಡಿದ್ದು ಆ ವಾಹನವನ್ನು 4ನೇ ಆರೋಪಿ ಡೇವಿಡ್ ರವರ ಬಳಿ ಇರುತ್ತದೆ ಎಂದು ತಿಳಿಸಿ ತಾವು ವಾಹನ ಕಳವು ಮಾಡಿದ ಸ್ಥಳವನ್ನು ಗುರುತಿಸಲಾಗಿ ಪೊಲೀಸರು ಸ್ಥಳದಲ್ಲಿ ನಿಪಿ-29 ರಂತೆ ಸ್ಥಳ ಮಹಜರ್ ತಯಾರಿಸಿದಾಗ ನಾನು ಹಾಗೂ ಮಹಜರಿನ ಇತರೆ ಪಂಚ ಸಾಕ್ಷಿಗಳು ಮಹಜರಿಗೆ ನಮ್ಮ ಸಹಿಗಳನ್ನು ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ-30 ಹಾಗೂ 31 ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ನಂತರ ಆರೋಪಿ-1 ಹಾಗೂ 2 ರವರು ಪಂಚರಾದ ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ಹಂಗರನಹಳ್ಳಿಯಿಂದ ಸ್ವಲ್ಪ ಮುಂದೆ ನ್ಯಾಮಹಳ್ಳಿ ಹತ್ತಿರ ಎನ್ ಟಿ ಆರ್ ಜಲ್ಲಿ ಕ್ರಷರ್ ಹತ್ತಿರ ಸಂಜೆ 4.40 ಗಂಟೆಗೆ ಕರೆದುಕೊಂಡು ಹೋಗಿ ವಾಹನದಿಂದ ಇಳಿದು ವಾಹನವನ್ನು ನಿಲ್ಲಿಸಿ ಅವರು ಹಿಂದಿನ ವರ್ಷ ಮೇ ತಿಂಗಳ 17ನೇ ತಾರೀಖಿನಂದು ಎಪಿ.26.ವೈ.7484 ನಂಬರಿನ ಬೊಲೆರೋ ಕ್ಯಾಂಪರ್ ವಾಹನವನ್ನು ಕಳವು ಮಾಡಿಕೊಂಡು ಹೋಗುತ್ತಿರುವಾಗ ಸದರಿ ವಾಹನ ಕೆಟ್ಟು ನಿಂತಿದ್ದು ಅದು ಸ್ಟಾರ್ಟ್ ಆಗದ ಕಾರಣ ಕ್ರಷರ್ ಬಳಿ ನಿಲ್ಲಿಸಿ ಹೋಗಿದ್ದಾಗಿ ತಿಳಿಸಿದ ಮೇರೆಗೆ ಪೊಲೀಸರು ಸದರಿ ಸ್ಥಳವನ್ನು ಪರಿಶೀಲಿಸಿ ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-32 ರಂತೆ ಸ್ಥಳ ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಹಾಗೂ ಮಹಜರಿನ ಪಂಚ ಸಾಕ್ಷಿಗಳು ಮಹಜರಿಗೆ ಸಹಿ ಮಾಡಿದ್ದು ಆ ಕಾಲದಲ್ಲಿ ಪೊಲೀಸರು ನಿಪಿ-33 ಹಾಗೂ 34 ಫೋಟೋಗಳನ್ನು ಸಹ ತೆಗೆದಿರುತ್ತಾರೆಂದರೆ ಸರಿಯಲ್ಲ. ನಂತರ

ಆರೋಪಿ–1 ಹಾಗೂ 2 ರವರು ಅದೇ ದಿನ ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ಚೆನ್ನರಾಯಪಟ್ಟಣ ರಸ್ತೆಯ ಗಂಡಸಿ ಸಾತೇನಹಳ್ಳಿ ಭೀಮಣ್ಣರವರ ಮನೆಯ ಬಳಿ ರಾತ್ರಿ 10.45 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ವಾಹನದಿಂದ ಇಳಿದು ಸ್ಥಳ ಗುರುತಿಸಿ ಹಿಂದಿನ ವರ್ಷ ಮಾರ್ಚ್ ತಿಂಗಳ 25 ರಂದು ಆ ಸ್ಥಳದಿಂದ ಕಪ್ಪು ಬಣ್ಣದ ಕೆಎ.01.ಹೆಚ್ ಜಿ.3048 ನಂಬರಿನ ರಾಯಲ್ ಎನ್ ಫೀಲ್ಡ್ ಬೈಕನ್ನು ಕಳವು ಮಾಡಿ ನಂಬರ್ ಪ್ಲೇಟನ್ನು ಬದಲಾಯಿಸಿದ್ದು ಸದರಿ ಬೈಕನ್ನು 2ನೇ ಆರೋಪಿ ಚಲಾವಣೆ ಮಾಡಿಕೊಂಡಿದ್ದು ಸದರಿ ಬೈಕ್ ಆತನ ಸ್ವಂತ ಊರಿನಲ್ಲಿರುತ್ತದೆ ಎಂದು ಮಾಹಿತಿ ನೀಡಿ ಬೈಕ್ ಕಳವು ಮಾಡಿದ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ಸಾತೇನಹಳ್ಳಿ ಗ್ರಾಮದಲ್ಲಿ ಭೀಮಣ್ಣ ರವರ ಖಾಲಿ ಜಾಗದಲ್ಲಿ ನಿಪಿ–38 ರಂತೆ ಸ್ಥಳ ಮಹಜರ್ ತಯಾರಿಸಿದ್ದು ಆ ಕಾಲದಲ್ಲಿ ನಾನು ಹಾಗೂ ಮಹಜರಿನ ಇತರೆ ಪಂಚ ಸಾಕ್ಷಿಗಳು ಮಹಜರಿಗೆ ಸಹಿಗಳನ್ನು ಮಾಡಿದ್ದು ಪೊಲೀಸರು ನಿಪಿ–39 ಹಾಗೂ 40 ಫೋಟೋಗಳನ್ನು ಸಹ ತೆಗೆದಿರುತ್ತಾರೆಂದರೆ ಸರಿಯಲ್ಲ.

16. ದಿ:23.06.2022 ರಂದು ಹಳೇಬೀಡು ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರಾದ ಶ್ರೀಕಾಂತ್ ಎಸ್ ಎನ್ ರವರು ಅರೇಹಳ್ಳಿ ಪೊಲೀಸರ ಮುಖಾಂತರ ನಮ್ಮನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ ಆರೋಪಿ–1 ಹಾಗೂ 2 ರವರು ಉಳಿದ ಆರೋಪಿಗಳೊಂದಿಗೆ ಸೇರಿ ಕಳ್ಳತನ ಮಾಡಿದ ಬೈಕ್ ಹಾಗೂ ಅಶೋಕ್ ಲೈಲ್ಯಾಂಡ್ ವಾಹನಗಳನ್ನು ಇಟ್ಟಿರುವ ಸ್ಥಳಗಳನ್ನು ತೋರಿಸುವುದಾಗಿ ಮಾಹಿತಿ ನೀಡಿದ್ದು ಆ ವಾಹನವನ್ನು ಅಮಾನತ್ತುಪಡಿಸಿಕೊಳ್ಳಬೇಕಾಗಿದ್ದು ತನಿಖೆಗೆ ಸಹಕರಿಸುವಂತೆ ಕೋರಿರುತ್ತಾರೆ ನಾವು ತನಿಖೆಯಲ್ಲಿ ಸಹಕರಿಸಲು ಒಪ್ಪಿಕೊಂಡಿರುತ್ತೇವೆ. ನಂತರ ಸಿಪಿಐ ರವರು

ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಪಂಚರಾದ ನಮ್ಮನ್ನು, ಸಿಬ್ಬಂದಿಗಳನ್ನು ಹಾಗೂ ಅರೋಪಿಗಳನ್ನು ಕರೆದುಕೊಂಡು ಇಲಾಖಾ ಜೀಪಿನಿಂದ ಹೊರಟಿದ್ದು ನಂತರ ಆರೋಪಿಗಳು 2ನೇ ಆರೋಪಿ ವಿಜಯಕುಮಾರನ ಸ್ವಂತ ಊರಾದ ಗುಡ್ಡದ ತೆರಣ್ಯ ಗ್ರಾಮದ ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 12.45 ಗಂಟೆಗೆ ಬಂದು ವಾಹನದಿಂದ ಇಳಿದು 2ನೇ ಆರೋಪಿ ವಿಜಯಕುಮಾರ್ ರವರು ನಮ್ಮನ್ನು ದೇವಸ್ಥಾನದ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಅಶೋಕ್ ಲೈಲ್ಯಾಂಡ್ ದೋಸ್ತ್ ವಾಹನ ತೋರಿಸಿದ್ದು, ವಾಹನದ ನಂಬರ್ ಕೆಎ.46.46907 ಎಂದು ನಮೂದಾಗಿದ್ದು ಸದರಿ ವಾಹನಕ್ಕೆ ಸಂಬಂಧಿಸಿದಂತೆ ಬೇಲೂರು ಠಾಣೆಯಲ್ಲಿ ಮೊ:ನಂ.104/22 ದಾಖಲಾಗಿರುವ ಬಗ್ಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. 2ನೇ ಆರೋಪಿ ಸ್ಥಳದಲ್ಲಿ ಕಪ್ಪು ಬಣ್ಣದ ರಾಯಲ್ ಎನ್ ಫೀಲ್ಡ್ ಬೈಕ್ ತೋರಿಸಲಾಗಿ ಆ ಬೈಕಿನ ನಂಬರ್ ಕೆಎ.29.ವೈ.5775 ಎಂದು ಅದರ ನೊಂದಾವಣಿ ಸಂಖ್ಯೆ ನಮೂದಿಸಲಾಗಿದ್ದು ಸದರಿ ಬೈಕಿನ ನಂಬರ್ ಪ್ಲೇಟ್ ಬದಲಾಯಿಸಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಪೊಲೀಸರು ವಾಹನದ ಇಂಜಿನ್ ನಂಬರ್ ಹಾಗೂ ಚಾಸಿ ನಂಬರ್ ಮೂಲಕ ವಾಹನದ ಗುರುತನ್ನು ಮೊಬೈಲ್ ನಲ್ಲಿ ನೋಡಿ ಸದರಿ ವಾಹನದ ಸರಿಯಾದ ನೊಂದಾವಣಿ ಸಂಖ್ಯೆ ಕೆಎ.01.ಹೆಚ್.ಜಿ.3048 ಆಗಿರುವುದಾಗಿ ಕಂಡುಕೊಂಡಿರುತ್ತಾರೆ. 2ನೇ ಆರೋಪಿ ವಿಜಯಕುಮಾರ ಆ ಬೈಕಿನ ನಂಬರ್ ಪ್ಲೇಟನ್ನು ಬದಲಾಯಿಸಿದ ಬಗ್ಗೆ ಆತನಿಂದ ತಿಳಿದು ಬಂದಿದ್ದು ಹಾಗೂ ಸದರಿ ವಾಹನ ಚೆನ್ನರಾಯಪಟ್ಟಣ ಗ್ರಾಮಾಂತರ ಠಾಣಾ ಮೊ:ನಂ137/22 ಪ್ರಕರಣಕ್ಕೆ ಸಂಬಂಧಿಸಿದ ವಾಹನ ಆಗಿರುವುದು ಕಂಡುಬಂತು ಎಂದರೆ ಸರಿಯಲ್ಲ. ಸಿಪಿಐ ರವರು ಮೇಲೆ ಕಾಣಿಸಿದ ಎರಡೂ ವಾಹನಗಳನ್ನು ತನಿಖೆಗಾಗಿ ನಮ್ಮ

ಸಮಕ್ಷಮ ನಿಪಿ–56 ರಂತೆ ಮಹಜರ್ ತಯಾರಿಸಿ ಸದರಿ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ–56 ಮಹಜರ್ ಕಾಲದಲ್ಲಿ ಪೊಲೀಸರು ನಿಪಿ–57 ಹಾಗೂ 58 ಫೋಟೋಗಳನ್ನು ತೆಗೆಸಿರುತ್ತಾರೆಂದರೆ ಸರಿಯಲ್ಲ. ನಾನು ಹಾಗೂ ಮಹಜರಿನ ಪಂಚ ಸಾಕ್ಷಿಗಳು ನಿಪಿ–56 ಮಹಜರಿಗೆ ನಮ್ಮ ಸಹಿಗಳನ್ನು ಮಾಡಿರುತ್ತೇವೆಂದರೆ ಸರಿಯಲ್ಲ. ಮೇಲೆ ಕಾಣಿಸಿದ ಸ್ಥಳ ಮಹಜರುಗಳಿಗೆ ಸಂಬಂಧಿಸಿದಂತೆ ನಾನು ಪೊಲೀಸರಲ್ಲಿ ಈಗ ನನಗೆ ಓದಿ ಹೇಳಲಾದಂತೆ "ದಿಃ19.06.2022 ರಂದು ---------------- ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ " ಎಂದು ನಿಪಿ–59 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ದಾಖಲಿಸಿದ ನನ್ನ ಹೇಳಿಕೆಯಲ್ಲಿ ತಿಳಿಸಿದ ಎಲ್ಲಾ ಮಹಜರುಗಳ ಕಾಲದಲ್ಲಿ ಹಾಜರಿದ್ದು ಪೊಲೀಸರಿಗೆ ತನಿಖೆಗೆ ಸಹಕರಿಸಿ ಮಹಜರುಗಳಿಗೆ ಸಹಿ ಮಾಡಿ ಪೊಲೀಸರು ತೆಗೆದ ಫೋಟೋಗಳಲ್ಲಿ ನಿಂತಿದ್ದು ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟಿ ಸವಾಲು ಇರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.